

ಯಾವುದೇ ಹೆಂಡತಿಗೆ ಅದು ತರುವ ಸಂಕಟದ ತೀವ್ರತೆ ಈಗ ಅವಳನ್ನು ತಾಕುತ್ತಿತ್ತು. 'ಆಮೇಲೆ... ಏನು ಮಾಡಿದೆ?' ಸಾವನಿ ತಡವರಿಸುತ್ತಾ ಕೇಳಿದಳು. ಸ್ವಲ್ಪ ಹೊತ್ತು ಸುಮ್ಮನಿದ್ದ ಮಧುವಂತಿ ನಕ್ಕಳು, 'ಒಂದು ಕಡೆ ನನ್ನ ಆತ್ಮಗೌರವ ಕುಸಿದಿದ್ದರೆ ಇನ್ನೊಂದೆಡೆ ನನ್ನ ಗಂಡನ ಮೇಲೆ ಸಿಟ್ಟು ಉಕ್ಕೇರುತ್ತಿತ್ತು. ಅವನಿಗೆ ಪಾಠ ಕಲಿಸಬೇಕಿತ್ತು. ಹತ್ತು ವರ್ಷಗಳ ಪ್ರೇಮ, ಏಳು ವರ್ಷಗಳ ಮದುವೆ... ಅವನ ಬಗ್ಗೆ ಮೈಪೂರ ಹತ್ತಿ ಉರಿಯುವಂತಹ ಸಿಟ್ಟು. ನನ್ನ ಮನಸ್ಸು ಆಗ ಲಾಜಿಕಲ್ ಆಗಿ ಯೋಚಿಸುತ್ತಿರಲಿಲ್ಲ, ಏನಾದರೂ ಮಾಡಬೇಕು, ಅವನಿಗೆ ನೋವಾಗುವ ಹಾಗೆ ಏನಾದರೂ ಮಾಡಬೇಕು, ಇಷ್ಟೇ ನನ್ನ ಮನಸ್ಸಿನಲ್ಲಿದ್ದದ್ದು. ಅದಕ್ಕೇ...' ಉಳಿದ ಮೂವರೂ ಅವಳನ್ನೇ ದಿಟ್ಟಿಸುತ್ತಿದ್ದರು, 'ನಾನು ಒಂದು ಡೇಟಿಂಗ್ ಆಪ್ ಡೌನ್ಲೋಡ್ ಮಾಡಿಕೊಂಡೆ...' ಈಗ ಕಲ್ಯಾಣಿ ತಬ್ಬಿಬ್ಬಾದರೆ, ಸಾವನಿ ಬೆಪ್ಪಾಗಿ ನೋಡಿದಳು, ವಿಭಾ ಜೋರಾಗಿ ನಗತೊಡಗಿದಳು. 'ನನಗೆ ಆವೇಶದಲ್ಲಿ ಹಾಗೇ ಉಸಿರುಕಟ್ಟಿದಂತಾದರೆ ತಡೆಯಲಾಗುವುದಿಲ್ಲ, ಹಾರಿಬಿಡುತ್ತೇನೆ, ಆ ಕ್ಷಣದಲ್ಲಿ ನನ್ನ ಮನಸ್ಸಿನಲ್ಲಿದ್ದದ್ದೆಲ್ಲಾ ಸಿಟ್ಟು, ನನಗೆ ಅವನು ಕೊಟ್ಟ ನೋವನ್ನು ನಾನೂ ಅವನಿಗೆ ಕೊಡಬೇಕು ಎನ್ನುವ ಹಟ... ಆ ಮರುದಿನವೇ ಒಬ್ಬರೊಡನೆ ಡಿನ್ನರ್‌ಗೆ ಹೋದೆ. ಅಲ್ಲಿಂದಲೇ ನನ್ನ ಗಂಡನಿಗೆ